ರೈತ ಕಾಯಕ ಕೆರೆ ಯೋಜನೆ

973 (1156) - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತ ಕಾಯಕ ಕೆರೆ ಯೋಜನೆಯಡಿಯಲ್ಲಿ ಎಷ್ಟು ಕೆರೆಗಳ ಹೂಳು ಎತ್ತುವ ಕಾರ್ಯ ಪ್ರಾರಂಭಿಸಲಾಗಿದೆ ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು;

ಆ) ಈ ಕಾಮಗಾರಿಗೆ ವಿಶ್ವಬ್ಯಾಂಕ್ ಹಾಗೂ ರಾಜ್ಯ ಸರ್ಕಾರ ನೀಡಿರುವ ಮೊತ್ತವೆಷ್ಟು;

ಇ) ಇಲ್ಲಿಯವರೆಗೆ ಈ ಯೋಜನೆಗೆ ಖರ್ಚಾಗಿರುವ ಹಣವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ರೈತ ಕಾಯಕ ಕೆರೆ ಯೋಜನೆಯಡಿ ರಾಜ್ಯದಲ್ಲಿ ಪ್ರತಿ ಹೋಬಳಿಗೆ ಒಂದು ಕೆರೆಯಂತೆ 745 ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಅನುಮೋದನೆ ನೀಡಿದೆ. ಈ ಪೈಕಿ ಮತಕ್ಷೇತ್ರಕ್ಕೆ ಒಂದು ಕೆರೆಯಂತೆ 194 ಕೆರೆಗಳನ್ನು ಪ್ರಾರಂಭಿಕ ಹಂತದಲ್ಲಿ ಪುನರುಜ್ಜೀವನಗೊಳಿಸುವ ಕಾಮಗಾರಿಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ಕೆರೆಗಳ ಅಂದಾಜು ಪಟ್ಟಿಗಳನ್ನು ತಯಾರಿಸುವ ಹಾಗೂ ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸುವ ಕ್ರಮವನ್ನು ಕೈಗೊಳ್ಳಲಾಗುತ್ತದೆ. ಇನ್ನೂ ಯಾವುದೇ ಕಾಮಗಾರಿಯನ್ನು ಪ್ರಾರಂಭಿಸಿಲ್ಲ. ಕಾಮಗಾರಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಕಾಮಗಾರಿಗಳಿಗೆ ವಿಶ್ವಬ್ಯಾಂಕ್ ನೆರವು ಪಡೆದಿರುವುದಿಲ್ಲ. ಆದರೆ ಕಳೆದ ವರ್ಷ ಈ ಉದ್ದೇಶಕ್ಕಾಗಿ 20.00 ಕೋಟಿ ರೂಗಳನ್ನು ಮೀಸಲಿಡಲಾಗಿತ್ತು.

ಇ) ಯಾವುದೇ ಹಣ ಖರ್ಚು ಮಾಡಿರುವುದಿಲ್ಲ.

ಅನುಬಂಧ

ರೈತ ಕಾಯಕ ಕೆರೆ ಯೋಜನೆಯಲ್ಲಿ ಮೊದಲನೇ ಹಂತದ ಕಾಮಗಾರಿಯ ಅನುಷ್ಠಾನದಲ್ಲಿ ಪ್ರಾರಂಭವಾಗಿ ಸ್ಥಗಿತಗೊಂಡಿರುವ ಕಾಮಗಾರಿಗಳ ಪಟ್ಟಿ

ಕ್ರಮ ಸಂಖ್ಯೆ	ಅನುಮೋದಿತ ಪಟ್ಟಿಯಲ್ಲಿನ ಕ್ರಮ ಸಂಖ್ಯೆ	ಜಿಲ್ಲೆ: ತಾಲ್ಲೂಕು	ಕೆರೆಯ ಹೆಸರು	ಅಂದಾಜು ಮೊತ್ತ (ಲಕ್ಷ ರೂಗಳಲ್ಲಿ)
1)	2	ಶಿವಮೊಗ್ಗ:ಭದ್ರಾವತಿ	ಹುಣಸಿಕಟ್ಟೆ ಸಿದ್ಧಕಟ್ಟೆ ಕೆರೆ	5.70
2)	5	ಶಿವಮೊಗ್ಗ:ಶಿಕಾರಿಪುರ	ಜಾಡನಾಯಕನಕೊಪ್ಪ ಹೊಸಕೆರೆ	23.10
3)	6	ಶಿವಮೊಗ್ಗ:ಸೊರಬ	ತಲ್ಲೂರು ಲಬ್ಬಳಗೆರೆ ದೊಡ್ಡಕೆರೆ	25.15
4)	30	ಚಾಮರಾಜನಗರ: ಗುಂಡ್ಲುಪೇಟೆ	ಬೀರಂಬಾಡಿ ಕೆಂಪುಸಾಗರ	9.67
5)	32	ಚಾಮರಾಜನಗರ: ಕೊಳ್ಳೇಗಾಲ	ಉಗುನಿಯ ಕೆರೆ	14.70
6)	36	ದಕ್ಷಿಣ ಕನ್ನಡ: ಮಂಗಳೂರು	ಮಳವಾರು ಸಿದ್ಧವಿನಾಯಕ	8.40

1	2	3	4	5
7)	38	ದಕ್ಷಿಮ ಕನ್ನಡ: ಮಂಗಳೂರು	ಕಡಲಕೆರೆ	6.12
8)	45	ಉಡುಪಿ: ಕುಂದಾಪುರ	ಹೇರಿಕೆರೆ	10.53
9)	48	ದಾವಣಗೆರೆ:ಹೊನ್ನಾಳಿ	ಸದಳಂಗ ಹೊಸಕೆರೆ	120.00
10)	49	ದಾವಣಗೆರೆ:ದಾವಣಗೆರೆ	ಕೊಡಗನೂರು ಕೆರೆ	33.00
11)	64	ತುಮಕೂರು: ಚಿಕ್ಕನಾಯಕನಹಳ್ಳಿ	ಸಿದ್ದನಕಟ್ಟೆ ಕೆರೆ	22.75
12)	65	ತುಮಕೂರು: ತಿಪಟೂರು	ಶಿವರ ದೊಡ್ಡ ಕೆರೆ	27.00
13)	69	ತುಮಕೂರು:ಶಿರಾ	ಸೀಬಿ ಅಗ್ರಹಾರ ಕೆರೆ	37.00
14)	143	ಕೋಲಾರ: ಶಿಡ್ಲಘಟ್ಟ	ಮಳಮಾಚನಹಳ್ಳಿ ಕೆರೆ	15.60
15)	187	ಹಾಸನ:ಅರಸೀಕೆರೆ	ಬೊಮ್ಮೇನಹಳ್ಳಿ ಕೆರೆ	6.70
16)	188	ಮೈಸೂರು: ಮೈಸೂರು	ವರುಣಾಕೆರೆ	6.43
17)	190	ಮೈಸೂರು: ಹುಡಸೂರು.	ಕಚ್ಚುವಿನಹಳ್ಳಿ ಕೆರೆ	33.30

ಅಬಕಾರಿ ತೆರಿಗೆ ಸಂಗ್ರಹಣೆ

974 (1157) - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್): ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಹಾಗೂ ವಾಣಿಜ್ಯ ತೆರಿಗೆಯನ್ನು ಒಟ್ಟಿಗೆ ಸೇರಿಸಿ ಅಬಕಾರಿ ಇಲಾಖೆಯಿಂದಲೇ ವಸೂಲು ಮಾಡುತ್ತಿರುವ ಮೊತ್ತವೆಷ್ಟು;

ಇದನ್ನು ಯಾವ ದಿನಾಂಕದಿಂದ ಜಾರಿಗೊಳಿಸಲಾಗಿದೆ.

ಇದರ ಅವಧಿ ಯಾವ ದಿನಾಂಕದವರೆಗೆ ನಿಗದಿಪಡಿಸಲಾಗಿದೆ?

ಆ) ಮಾಸಿಕವಾಗಿ ಬರುತ್ತಿರುವ ತೆರಿಗೆ ಮೊತ್ತವೆಷ್ಟು;
ಇಲ್ಲಿಯವರೆಗೆ ಸಂಗ್ರಹಿಸಲಾದ ಮೊತ್ತವೆಷ್ಟು?

ಇ) ಸಂಯುಕ್ತವಾಗಿ ತೆರಿಗೆ ವಸೂಲಿ ಮಾಡುವುದರಿಂದ ಹಣ ವಸೂಲಾತಿ ಹೆಚ್ಚಿದೆಯೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) 2001-02ನೇ ಆರ್ಥಿಕ ವರ್ಷದಲ್ಲಿ 610.17 ಕೋಟಿ ರೂ.ಗಳು ವಸೂಲಾಗಿದೆ.

ದಿನಾಂಕ 16.02.2001 ರಿಂದ.

ಈ ಪದ್ಧತಿಯನ್ನು ಸರ್ಕಾರ ಮಯದುವರಿಸಿದೆ.

ಆ) ಮಾಸಿಕವಾಗಿ 15.68 ಕೋಟಿ ರೂ.ಗಳು.

2001-02ನೇ ಆರ್ಥಿಕ ವರ್ಷದಲ್ಲಿ ಒಟ್ಟು 188.17 ಕೋಟಿ ರೂ.ಗಳ ಸಂಗ್ರಹಣೆಯಾಗಿರುತ್ತದೆ.